**ಸಾಕ್ಷಿಯನ್ನು ದಿನಾಂಕಃ 12-08-2022 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಯು 1) ಒಂದು ಎಳೆಯ ಚಿನ್ನದ ಕರಿಮಣಿ ಸರ, 2) 2 ಚಿನ್ನದ ಸರಗಳು, 3) ಒಂದು ಜೊತೆ ಕಿವಿರಿಂಗ್ ಮತ್ತು ಒಂದು ಜೊತೆ ಕಿವಿಯೋಲೆ, 4) ಒಂದು ನೆಕ್ಲೇಸ್, 5) ಒಂದು ನಾಣ್ಯ, 6) ಮುತ್ತಿನ ಹಾರ, 7) ಒಂದು ಜೊತೆ ಓಲೆ, ಒಂದು ಜೊತೆ ಮಾಟಿ, ಒಂದು ಜೊತೆ ಮೇಗಾ ಮತ್ತು ಒಂದು ಜೊತೆ ಪ್ಲೇಟ್, 8) 8 ಅಷ್ಟಪಟ್ಟಿ ಗುಂಡುಗಳು ಮತ್ತು ಒಂದು ಲಾಕೆಟ್, 9) ಒಂದು ಜೊತೆ ಕಿವಿಯೋಲೆ, 10) ಒಂದು ಸಣ್ಣ ಹರಳಿನ ಉಂಗುರ, 11) ಒಂದು ದೊಡ್ಡ ಹರಳಿನ ಉಂಗುರ, 12) ಒಂದು ಗಟ್ಟಿ ಉಂಗುರವನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುಮಾ-1 ರಿಂದ 12 ಎಂದು ಗುರುತಿಸಲಾಯಿತು.

ಆಭರಣಗಳನ್ನು ನಾನು ಗುರುತಿಸಿದ ಬಗ್ಗೆ ಪೋಲಿಸರು ನನ್ನ ಮರು ಹೇಳಿಕೆ ಪಡೆದಿರುತ್ತಾರೆ.

ಠಾಣೆಯಲ್ಲಿ ಪೋಲಪಿಸರು ನನಗೆ ತೋರಿಸಿದ ಇಬ್ಬರು ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿಯನ್ನು ಗುರುತಿಸಿರುತ್ತಾರೆ. 2 ನೇ ಆರೋಪಿ ಗೈರು ಹಾಜರಿದ್ದು ಆತನ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಪಿರ್ಯಾದು ನೀಡುವ ಪೂರ್ವದಲ್ಲಿ ನಮ್ಮ ಮನೆಯ ಬಳಿ ಅಕ್ಕಪಕ್ಕದ ಜನರು ಸೇರಿದ್ದರು. ಪಿರ್ಯಾದು ನೀಡಲು ಹೊನ್ನಾವರಕ್ಕೆ ನಾನು ಮತ್ತು ನನ್ನ ಹೆಂಡತಿಯಾದ ಚಾಸಾ-12 ಸಾವಿತ್ರಿ ಬಂದಿದ್ದೆವು. ಪಿರ್ಯಾದನ್ನು ನನ್ನ ಹೆಂಡತಿ ಕೈಬರಹದಲ್ಲಿ ಬರೆದಿರುತ್ತಾರೆ. ಪಿರ್ಯಾದನ್ನು 04-00 ರಿಂದ 05-00 ರ ಸಮಯದಲ್ಲಿ ನೀಡಿರುತ್ತೇನೆ. ಪೋಲಿಸ್ ಶ್ವಾನದಳ ನಮ್ಮ ಮನೆಯ ಬಳಿಗೆ ಮಧ್ಯಾಹ್ನ 12-00 ರ ಸಮಯಕ್ಕೆ ಬಂದಿತ್ತು. ಶ್ವಾನದಳ ನಮ್ಮ ಮನೆಯ ಬಳಿ ಬಂದಾಗ ಪೋಲಿಸರು ಯಾವುದೇ ದಾಖಲೆಯನ್ನು ಬರೆದುಕೊಂಡಿರುವುದಿಲ್ಲ. ಪೋಲಿಸರು ಪಂಚನಾಮೆಗೆ ದಿನಾಂಕ 09-03-2020 ರಂದು ಬೆಳಿಗ್ಗೆ 09-00 ರ ಸಮಯಕ್ಕೆ ಬಂದಿದ್ದರು. ಪಂಚನಾಮೆಗೆ ಚಾಸಾ-2 ಮಂಜುನಾಥ ಭಟ್ಟ ಮತ್ತು ಚಾಸಾ-3 ಗೋಪಾಲಕೃಷ್ಣ ಭಟ್ಟ ಬಂದಿದ್ದರು. ಪಂಚನಾಮೆ ಸಂದರ್ಭದಲ್ಲಿ ನಮ್ಮ ಮನೆಯಲ್ಲಿ ಕಳ್ಳತನವಾದ ಆಭರಣಗಳಿಗೆ ಸಂಬಂಧಿಸಿದಂತೆ ಪೋಲಿಸರಿಗೆ ರಸೀದಿಯನ್ನು ನೀಡಿರುವುದಿಲ್ಲ.

ತದನಂತರ ಪೋಲಿಸರು ಪದೇ ಪದೇ ಸುಮಾರು 8-10 ಬಾರಿ ನಮ್ಮ ಮನೆಗೆ ಬಂದಿರುತ್ತಾರೆ. ದಿನಾಂಕ 04-08-2020 ರಂದು ಪೋಲಿಸರು ಪಂಚನಾಮೆ ಮಾಡಿದ್ದಾರೋ ಅಥವಾ ಇಲ್ಲವೋ ನೆನಪಿಲ್ಲ. ಸದರಿ ದಿನದಂದೂ ಸಹ ನಾನು ಬಂಗಾರ ಖರೀದಿ ಮಾಡಿದ ರಸೀದಿಗಳನ್ನು ನೀಡಿರುವುದಿಲ್ಲ.

ಬಂಗಾರದ ಆಭರಣಗಳನ್ನು ನಾನು ಮತ್ತು ನನ್ನ ಹೆಂಡತಿ ಇಬ್ಬರೂ ಸೇರಿ ಬೇರೆ ಬೇರೆ ಕಡೆ ಮಾಡಿಸಿರುತ್ತೇವೆ. ದಿನಾಂಕ 04-08-2020 ರಂದು ಪೋಲಿಸರು ಆರೋಪಿಗಳನ್ನು ನಮ್ಮ ಮನೆಯ ಬಳಿ ಕರೆದುಕೊಂಡು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-12 ನ್ನು 1 ನೇ ಆರೋಪಿಯ ತಂಗಿಯ ಆಭರಣ ಎಂದರೆ ಸರಿಯಲ್ಲ. ಸದರಿ ಆಭರಣವನ್ನು 1 ನೇ ಆರೋಪಿ ಮಣಪುರಂ ಫೈನಾನ್ಸನಲ್ಲಿ ಅಡವಿಟ್ಟು ಸಾಲ ತೆಗೆದುಕೊಂಡಿದ್ದ ಎಂದರೆ ಸರಿಯಲ್ಲ. ಬಂಗಾರದ ಆಭರಣಗಳನ್ನು ಖರೀದಿಸಿದ ಬಗ್ಗೆ ನನ್ನ ಬಳಿ ರಸೀದಿ ಇಲ್ಲ ಎಂದರೆ ಸಾಕ್ಷಿ ಕೆಲವು ಆಭರಣಗಳಿಗೆ ಸಂಬಂಧಿಸಿದಂತೆ ರಸೀದಿ ಇದ್ದು ಎಲ್ಲಾ ಆಭರಣಗಳಿಗೆ ರಸೀದಿ ಇಲ್ಲ ಎಂದು ಹೇಳುತ್ತಾರೆ. ಸದರಿ ರಸೀದಿಗಳನ್ನು ನಮ್ಮ ವಕೀಲರ ಬಳಿ ನೀಡಿರುತ್ತೇನೆ. ಮುಮಾ-12 ನಮ್ಮ ಮನೆಯಿಂದ ಕಳ್ಳತನವಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**